# ಫೆ.1–2ರಂದು 'ಡೈಲಾಗ್'

ಹುಬ್ಬಳ್ಳಿ: ದೇಶಪಾಂಡೆ ಫೌಂಡೇಶನ್‌ನಿಂದ ನಗರದಲ್ಲಿ ಫೆ.1 ಮತ್ತು 2 ರಂದು 'ಡೆವಲಪ್‌ಮೆಂಟ್ ಡೈಲಾಗ್–2020' ಹಾಗೂ 'ಸ್ಟಾರ್ಟ್‌ಅಪ್ ಡೈಲಾಗ್–2020' ಸಮ್ಮೇಳನ ಆಯೋಜಿಸಲಾಗಿದೆ ಎಂದು ಫೌಂಡೇಶನ್ ಸಂಸ್ಥಾಪಕ ಡಾ.ಗುರುರಾಜ ದೇಶ್ ದೇಶಪಾಂಡೆ ತಿಳಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಫೆ. 2ರಂದು ಗೋಕುಲ ರಸ್ತೆಯ ದೇಶಪಾಂಡೆ ಸ್ಟಾರ್ಟ್‌ಅಪ್ ಕ್ಯಾಂಪಸ್‌ನಲ್ಲಿ ನಡೆಯುವ 'ಸ್ಟಾರ್ಟ್‌ಅಪ್ ಡೈಲಾಗ್–2020' ಸಮ್ಮೇಳನದಲ್ಲಿ ಉಪರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು ಅವರು ಪಾಲ್ಗೊಳ್ಳಲಿದ್ದು, ಸ್ಕಿಲ್ಲಿಂಗ್ ಸೆಂಟರ್ ಉದ್ಘಾಟಿಸಲಿದ್ದಾರೆ ಎಂದರು.ಈ ವರ್ಷದ ಸಮ್ಮೇಳನದ ಆಶಯವಾಗಿರುವ 'ಅಲೈನಿಂಗ್ ಇಂಟೆನ್ಷನ್, ಇನೋವೇಶನ್ ಆ್ಯಂಡ್ ಇಂಪ್ಯಾಕ್ಟ್' ಎಂಬ ಪರಿಕಲ್ಪನೆಯೊಂದಿಗೆ 'ದಿ ಡೆವಲಪ್‌ಮೆಂಟ್ ಡೈಲಾಗ್–2020' ಆರಂಭವಾಗಲಿದೆ. ಎರಡು ದಿನಗಳ ಕಾರ್ಯಕ್ರಮದಲ್ಲಿ ತಜ್ಞರು, ಸುಧಾರಕರು, ನೀತಿ ರೂಪಕರು ಭಾಗವಹಿಸಿ ಅಮೂಲ್ಯ ಸಲಹೆ ನೀಡಲಿದ್ದು ಗಣನೀಯ ಪ್ರಮಾಣದಲ್ಲಿ ಸಾಮಾಜಿಕ ಪರಿಣಾಮ ಸಾಧಿಸಲು ಸಹಕರಿಸಲಿದ್ದಾರೆ ಎಂದು ತಿಳಿಸಿದರು.ಫೆ.1 ರಂದು ಆಶಯ ಭಾಷಣದ ಮೂಲಕ ಸಮ್ಮೇಳನ ಆರಂಭಗೊಳ್ಳಲಿದ್ದು ಕೃಷಿಯ ಸಾಮರ್ಥ್ಯತೆ, ಕೌಶಲ್ಯತೆ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಬಗ್ಗೆ ತಜ್ಞರು ಚರ್ಚಿಸಲಿದ್ದಾರೆ.

ಅದೇ ದಿನ ಸಂಜೆ ಇನ್ಫೋಸಿಸ್ ಸಭಾಂಗಣದಲ್ಲಿ 'ಇವನಿಂಗ್ ವಿತ್ ಲೆಜೆಂಡ್ಸ್' ಕಾರ್ಯಕ್ರಮದ ಮೂಲಕ ಮುಕ್ತಾಯಗೊಳ್ಳಲಿದೆ. ಈ ಕಾರ್ಯಕ್ರಮದಲ್ಲಿ ಏರಿಯನ್ ಕೆಪಿಟಲ್‌ನ ಸಂಸ್ಥಾಪಕ ಮೋಹನದಾಸ್ ಪೈ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಸಂಯುಕ್ತ ಕರ್ನಾಟಕ Sat, 18 Jan
epaper.samy